**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.309/13**

**ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ- 2**

| | | |
|---|---|---|
| ಸಾಕ್ಷಿದಾರರ ಹೆಸರು | : | ಸೋಮಣ್ಣ |
| ತಂದೆಯ/ ಗಂಡನ ಹೆಸರು | : | ದೇವಪ್ಪ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ |
| ವಾಸ ಸ್ಥಳ | : | ಚಾಮರಾಜನಗರ |

**ದಿನಾಂಕ 27.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2012 ಸೆಪ್ಟಂಬರ್ ರಿಂದ 2013 ಫೆಬ್ರುವರಿ ರವರೆಗೆ ಸರಗೂರು ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 23.09.2012 ರಂದು ಬೆಳಿಗ್ಗೆ 7 ಗಂಟೆ ಸಮಯದಲ್ಲಿ ನಾನು ಠಾಣಾ ಉಸ್ತುವಾರಿಯಲ್ಲಿ ಇದ್ದಾಗ ಶಾಂತಿಪುರ ಗ್ರಾಮಸ್ಥರು ಠಾಣಾಗೆ ಕರೆ ಮಾಡಿ ತಿಳಿಸಿದ ವಿಷಯ ಏನೆಂದರೆ ಶಾಂತಿಪುರ ಗ್ರಾಮದ ಮಾರಮ್ಮನ ದೇವಸ್ಥಾನ ಬಳಿ ಇರುವ ಮಹರ್ಷಿ ವಾಲ್ಮೀಕಿ ನಾಮ ಫಲಕಕ್ಕೆ ಯಾರೋ ಕಿಡಿಗೇಡಿಗಳು ಅವಮಾನ ಮಾಡಬೇಕು ಚಪ್ಪಲಿ ಹಾರ ಹಾಕಿ ಗುಪು ಕಟ್ಟಿಕೊಂಡಿರುತ್ತಾರೆ ಕೂಡಲೇ ಬರಬೇಕು ಎಂದು ತಿಳಿಸಿರುತ್ತಾರೆ. ನಾನು ಸದರಿ ವಿಚಾರವನ್ನು SP, DYSP, ತಹಸೀಲ್ದಾರ ಮತ್ತು ಸಿಬ್ಬಂದಿಗಳಿಗೆ ತಿಳಿಸಿ, ಜೀಪಿನಲ್ಲಿ ಚಾಸಾ 6, 15 ರಿಂದ 18 ರವರನ್ನು

ಕರೆದುಕೊಂಡು ಸ್ಥಳಕ್ಕೆ ಹೋಗಿರುತ್ತೇನೆ. ಸ್ಥಳಕ್ಕೆ ಹೋಗಿ ಪರಿಶೀಲಿಸಲಾಗಿ ಚಪ್ಪಲಿ ಹಾರ ಹಾಕಿರುವುದು ಕಂಡು ಬಂದಿರುತ್ತದೆ. ಅಕ್ರಮ ಕೂಟ ಸೇರಿದ ಜನರನ್ನು ಸಮಾಧಾನಪಡಿಸಲು ನೋಡಿದಾಗ ಸಮಾಧಾನ ವಾಗದೇ ಪೊಲೀಸರಿಗೆ ಧಿಕ್ಕಾರ ಎಂದು ಕೂಗಿರುತ್ತಾರೆ. ನಂತರ ಸ್ಥಳಕ್ಕೆ SP, DYSP, ಹೆಚ್ ಡಿ ಕೋಟೆ CPI ಮತ್ತು ತಹಸೀಲ್ದಾರ ಬಂದಿರುತ್ತಾರೆ ಅವರು ಸಹ ಸಮಾಧಾನ ಪಡಿಸಿದರು ಕೇಳದೇ ಪೊಲೀಸರಿಗೆ ಧಿಕ್ಕಾರ ಎಂದು ಕೂಗಿರುತ್ತಾರೆ. ನಂತರ 12.30 ಸಮಯದಲ್ಲಿ ಲಿಂಗಾಯಿತ ಬೀದಿಗೆ ಹೋಗಿ ಹೊಡೆದು ಹಾಕೋಣ ಎಂದು ಹೊರಟಿರುತ್ತಾರೆ. ಆಗ CPI ಮತ್ತು ಸಿಬ್ಬಂದಿಗಳು ತಡೆಯಲು ಹೋದಾಗ ಅವರನ್ನು ಗುಂಪಿನಲ್ಲಿ ಇದ್ದವರು ಅಡ್ಡಗಟ್ಟಿ ವಾಹನ ಚಾಲಕನ ಸಮವಸ್ತ್ರವನ್ನು ಹಿಡಿದು ಎಳೆದಾಡಿರುತ್ತಾರೆ. ನಂತರ ತಹಸೀಲ್ದಾರವರು Sec 144 ಜಾರಿ ಮಾಡಿರುತ್ತಾರೆ. ನಂತರ ಎಲ್ಲಾ ಸಿಬ್ಬಂದಿಗಳು ಸೇರಿ ಗುಂಪನ್ನು ಚದುರಿಸಿರುತ್ತಾರೆ. ಸ್ಥಳದಲ್ಲಿ ಇದ್ದ ನಾಗೇಂದ್ರ ಎಂಬುವವರು ಕ್ರಮ ಕೈಗೊಳ್ಳಲಿ ಎಂದು ದೂರು ಕೊಟ್ಟಿರುತ್ತಾರೆ. ನಂತರ ಸಿಬ್ಬಂದಿ ಸಹಾಯದಿಂದ ಅವರ ಹೆಸರು ವಿಳಾಸ ಪಡೆದು ಸ್ಥಳದಲ್ಲಿ ವರದಿ ತಯಾರು ಮಾಡಿ ಪ್ರಕರಣ ದಾಖಲಿಸಿ ಚಾಸಾ 6 ರವರ ಮೂಲಕ ಠಾಣೆಗೆ ಕಳುಹಿಸಿ ಕೊಟ್ಟಿರುತ್ತೇನೆ. ಅದೇ ದಿನ ರಾತ್ರಿ ವರೆಗೂ ಶಾಂತಿಪುರ ಗ್ರಾಮದಲ್ಲಿ ಗಸ್ತುಮಾಡಿಕೊಂಡು ಇರುತ್ತೇವೆ. ದಿಃ24.09.2012 ರಂದು 10 ಗಂಟೆ ಸಮಯದಲ್ಲಿ ಎಚ್ ಡಿ ಕೋಟೆ ಸಿಪಿಐ ರವರು ಸ್ಥಳಕ್ಕೆ ಬಂದಾಗ ಸ್ಥಳವನ್ನು ತೋರಿಸಿದ ಮೇರೆಗೆ ಸ್ಥಳ ಮಹಜರ ಮಾಡಿರುತ್ತಾರೆ. ನಂತರ ನಾನು ಮರು ಹೇಳಿಕೆ ಕೊಟ್ಟಿರುತ್ತೇನೆ. ನಿವೇದನೆ ಯಲ್ಲಿ ಇರುವ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ನಿವೇದನೆ ನಿಪಿ 2 ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ 2 ಎ, ಸ್ಥಳ ಮಹಜರನ್ನು ನಿಪಿ 3, ಸಾಕ್ಷಿ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ -**

ನನಗೆ ಮಾಹಿತಿ ತಿಳಿಸಿದವರು ಆರೋಪಿತರ ಹೆಸರನ್ನು ಹೇಳಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಸುಮಾರು 100 ಜನ ಇದ್ದರು. ಲಿಂಗಾಯತ ಬೀದಿಗೆ ಯಾರು ನುಗ್ಗಿರುತ್ತಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಗುಂಪಿನಲ್ಲಿ ಇದ್ದವರು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಶಾಂತಿಪುರ ದೊಡ್ಡ ಗ್ರಾಮ ಮತ್ತು ಹಲವಾರು ಜನಾಂಗ ಇರುವ ಗ್ರಾಮ ಎಂದರೆ ಸರಿ. ಸ್ಥಳ ಮಹಜರ ಜರುಗಿಸಲು ಎಚ್ ಡಿ ಕೋಟೆ ಸಿಪಿಐ ರವರು ನೋಟಿಸ್ ಕೊಟ್ಟು ಕರೆಸಿಕೊಂಡಿರುತ್ತಾರೆ. ಶಾಂತಿಪುರ ಗ್ರಾಮದಿಂದ ಮಂಚ್ಚಳ್ಳಿಗೆ ಎಷ್ಟು ದೂರು ಆಗುತ್ತದೆ ಎಂದು

ಗೊತ್ತಿಲ್ಲ. ಘಟನೆ ನಡೆದ ಮಾರನೇ ದಿನ ಮಹಜರ ಮಾಡಿರುತ್ತಾರೆ. ಪಂಚರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದು ಗೊತ್ತಿಲ್ಲ. ಶಾಂತಿಪುರ ಘಟನೆಗೆ ಸಂಬಂಧಪಟ್ಟಂತೆ 2 ಪ್ರಕರಣ ದಾಖಲು ಆಗಿತ್ತು. ಚಾಸಾ 22 ರವರ ಮುಂದೆ ನನ್ನ ಮರು ಹೇಳಿಕೆ ನೀಡಿರುತ್ತೇನೆ. ಕರ್ತವ್ಯದಲ್ಲಿ ಇದ್ದಾಗ ಮರು ಹೇಳಿಕೆ ನೀಡಿರುವುದಿಲ್ಲ. ಮಹಜರ ಆದ ನಂತರ ಹೇಳಿಕೆ ಕೊಟ್ಟಿರುತ್ತೇನೆ. ಚಾಸಾ 22 ರವರು ನನ್ನ ಮೇಲಾಧಿಕಾರಿ ಆಗಿರುವುದರಿಂದ ನಾನು ಯಾವುದೇ ಹೇಳಿಕೆ ಕೊಡದೇ ಇದ್ದರೂ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರಜರನ್ನು ಠಾಣೆಯಲ್ಲಿ ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್. ನಿಪಿ 2 ನ್ನು ಕೇಸಿಗಾಗಿ ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ 21 ಮತ್ತು 22 ಪರ ವಕೀಲರಿಂದಃ -</u>**

ಸದರಿ ದಿನ ಸ್ಥಳದಲ್ಲಿ ಯಾವುದೇ ಆರೋಪಿಗಳು ಇರಲಿಲ್ಲ, ಅಂಕಿ ಅಂಶಗಳಿಗೋಸ್ಕರ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಉಳಿದ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.</u>**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**